ತಣ್ಣೀರ್ ಬಾವಿ ಯೋಜನೆಯಡಿ ವಿದ್ಯುತ್ ಖರೀದಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 152(90)

ಸದಸ್ಯರ ಹೆಸರು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ್(ಇಂಧನ ಸಚಿವರು)

ಪ್ರಶ್ನೆ

ಅ) ಕಡಲತೀರದ ತಣ್ಣೀರುಬಾವಿ ವಿದ್ಯುತ್ ಉತ್ಪಾದನಾ ಯೋಜನೆಯಡಿ ರಾಜ್ಯವು ವಿದ್ಯುತ್ ಖರೀದಿ ಮಾಡುತ್ತಿದೆಯೇ?

ಆ) ಹಾಗಿದ್ದಲ್ಲಿ ವಿದ್ಯುತ್ ಖರೀದಿಯ ದರವೆಷ್ಟು? ಒಪ್ಪಂದದಂತೆ ನಿಗಧಿಪಡಿಸಿದ ದರವೆಷ್ಟು?

ಇ) ಒಪ್ಪಂದದ ದರದಲ್ಲಿ ವಿದ್ಯುತ್ ಖರೀದಿಸದಿದ್ದರೂ ಹಣಕಟ್ಟಬೇಕೆಂಬ ಷರತ್ತು ವಿಧಿಸಲಾಗಿರುವುದೇ?

ಈ) ಈ ಯೋಜನೆಗೆ ಪರಿಸರ ಇಲಾಖೆಯು ಅನುಮತಿ ನೀಡಲು ನಿರಾಕರಿಸಿದ್ದ ಅಂಶವು ನಿಜವೇ?

ಉತ್ತರ

ಅ) ಹೌದು

ಆ) ಖರೀದಿ ಮಾಡಲ್ಪಟ್ಟ ವಿದ್ಯುತ್‌ಗೆ ನಿಗಮವು ಪಾಲಿ ರೂ 3 24 ರಿಂದ 3 -50ನ್ನು ಪ್ರತಿ ಯೂನಿಟ್‌ಗೆ ನೀಡುತ್ತದೆ ಒಪ್ಪಂದದಂತೆ ಈ ಕೆಳಗೆ ನಮೂದಿಸಿರುವ ಛಾರ್ಜ್‌ಗಳನ್ನೂ ಸಹ ಪ್ರತಿ ತಿಂಗಳೂ ಪಾವತಿ ಮಾಡಬೇಕಾಗಿರುತ್ತದೆ ಇದರ ವಿವರಗಳು ಈ ಕೆಳಕಂಡಂತಿವೆ

1 ಡಾಲರ್ ಆಧಾರದ ಮೇಲೆ ಪಿಕ್ಸೆಡ್ ಛಾರ್ಜ್‌ಗಳು

2 ವೇರಿಯಬಲ್ ಛಾರ್ಜ್‌ಗಳು

3 ವಿದೇಶಿ ವಿನಿಮಯ ಹೊಂದಾಣಿಕೆ ದರ

ಅಲ್ಲದೇ, ವರ್ಷಕ್ಕೊಮ್ಮೆ ಪಿ ಎಲ್ ಎಫ್ (ಪ್ಲಾಂಟ್ ಲೋಡ್ ಫಾಕ್ಟರ್) ಶೇಕಡಾ 85ನ್ನು ಮೀರಿದರೆ ಈ ಹೆಚ್ಚುವರಿ ಉತ್ಪಾದನೆಗೆ ಯೂನಿಟ್‌ಗೆ ಮೂವತ್ತು ಪೈಸೆಯಂತೆ ಪ್ರೋತ್ಸಾಹಕ ದರವನ್ನು ನಿಗಮವು ಕಂಪನಿಗೆ ನೀಡುತ್ತದೆ

ಇ) ಕ ವಿ ಪ್ರ ನಿ ನಿ ಯು ಪ್ಲಾಂಟ್ ರೋಡ್ ಫ್ಯಾಕ್ಟರ್‌ನ ಕನಿಷ್ಠ ಶೇಕಡಾ 85ರಷ್ಟು ವಿದ್ಯುತ್ತನ್ನು ಪಡೆದುಕೊಳ್ಳಬೇಕೆಂದು ಷರತ್ತು ವಿಧಿಸಿದ್ದು, ಇದು ಸಾಧ್ಯವಾಗದಿದ್ದರೆ ಕಂಪೆನಿಯು ಘೋಷಿಸಿದ ವಿದ್ಯುತ್ ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಫಿಕ್ಸೆಡ್ ಛಾರ್ಜನ್ನು ಕಂಪೆನಿಗೆ ನಿಗಮವು ನೀಡಬೇಕಾಗುತ್ತದೆ

ಈ) ಈ ಯೋಜನೆಗೆ ಕೇಂದ್ರ ಸರ್ಕಾರದ ಪರಿಸರ ಇಲಾಖೆಯಿಂದಲೂ ಹಾಗೂ ರಾಜ್ಯದ ವಾಯು ಮಾಲಿನ್ಯ ನಿಯಂತ್ರಣ ಮಂಡಲಿಯಿಂದಲೂ ಅನುಮತಿ ಪಡೆಯಲಾಗಿದೆ

ಚನ್ನಗಿರಿ ತಾಲ್ಲೂಕು ಉಗ್ರಾಣ ಹೋಬಳಿಯಲ್ಲಿ ವಿದ್ಯುತ್ ಸ್ಟೇಷನ್ ಪ್ರಾರಂಭ

ಚುಕ್ಕೆ ಗುರುತಿಲ್ಲದ ಪ್ರಶ್ನ ಸಂಖ್ಯೆ 154(183)

ಸದಸ್ಯರ ಹೆಸರು ಶ್ರೀ ಕರಿಯಣ್ಣ ಹೊಳೆ ಹೊನ್ನೂರು)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು ಉಗ್ರಾಣ ಹೋಬಳಿಯಲ್ಲಿ ವಿದ್ಯುಚ್ಛಕ್ತಿಯು ಸಮರ್ಪಕವಾಗಿ ಇರದೆ ಕುಡಿಯುವ ನೀರು ಮತ್ತು ಹಿಟ್ಟಿನ ಗಿರಣಿಗಳಿಗೆ ತೊಂದರೆಯಾಗಿರುವುದು ನಿಜವಲ್ಲವೆ?

ಆ ಇದರ ಅಭಿವೃದ್ಧಿಗೆ ತಾವರೆಕೆರೆ ಗ್ರಾಮದಲ್ಲಿ ಒಂದು ಪವರ್ ಸ್ಟೇಷನ್ ಮಾಡಬೇಕೆಂದು ಇಲಾಖೆಯ ಪತಿಯಿಂದ ಶಿಫಾರಸ್ಸು ಮಾಡಿರುವುದು ಈಗ ಯಾವ ಹಂತದಲ್ಲಿ ಇದೆ?

ಇ ಈ ಪವರ್ ಸ್ಟೇಷನ್ ಪ್ರಾರಂಭ ಮಾಡುವುದರಿಂದ ಸುಮಾರು 35 ರಿಂದ 40 ಗ್ರಾಮಗಳಿಗೆ ಅನುಕೂಲವಾಗಲಿದ್ದು ಈ ಸ್ಟೇಷನ್ ಎಂದಿನಿಂದ ಪ್ರಾರಂಭಿಸಲಾಗುವುದು?